ಆ) **ಕೊಣಾಜೆ ಪೋಲೀಸ್ ಠಾಣೆ ಸಿಬ್ಬಂದಿ ಬಲ.**

ಪಿ.ಎಸ್.ಐ	ಎ.ಎಸ್.ಐ	ಹೆಚ್.ಸಿ	ಪೇದೆ
1	2	6	24

ಉಳ್ಳಾಲ ಪೋಲೀಸ್ ಠಾಣೆ ಸಿಬ್ಬಂದಿ ಬಲ

2	2	10	30

ಇ) ದಿನಾಂಕ: 1-7-94 ರಂದ 31-7-95 ರವರೆಗೆ ವರದಿಯಾದ ದರೋಡೆ ಮತ್ತು ಕೊಲೆ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ಕೊಣಾಜೆ ಪೋಲೀಸ್ ಠಾಣೆ

	ವರದಿ	ಪತ್ತೆ
ಕೊಲೆ	1	1
ದರೋಡೆ	-	-

ಉಳ್ಳಾಲ ಪೋಲೀಸ್ ಠಾಣೆ

ಕೊಲೆ	4	4

ಈ) ಜೀಪೊಂದನ್ನು ಒದಗಿಸಲಾಗಿದೆ.

ಗೋವಾ ಸ್ವಾತಂತ್ಯ ಹೋರಾಟಗಾರರ ಸಂಖ್ಯೆ

422 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಗೌರವಧನ ಸ್ವೀಕರಿಸುತ್ತಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು?

ಆ) ಇವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರ ಸಂಖ್ಯೆ ಎಷ್ಟು?

ಇ) ಗೌರವಧನಕ್ಕೋಸ್ಕರ ಅರ್ಜಿ ಹಾಕಿ ಸಿಗದಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು?

ಈ) ಇವರುಗಳ ಬಗ್ಗೆ ಸರ್ಕಾರದ ಧೋರಣೆ ಏನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ಗೋವಾ ವಿಮೋಚನಾ ಚಳುವಳಿಗಾರರಿಗೆ ಈಗ ಗೌರವಧನ ನೀಡುತ್ತಿಲ್ಲ.

ಆ) ಇದ್ದವಿಸುವುದಿಲ್ಲ.

ಇ) ಗೋವಾ ವಿಮೋಚನಾ ಚಳುವಳಿಗಾರರಿಗೆ ಗೌರವಧನ ಮಂಜೂರು ಮಾಡಲು ರೂಪಿಸಿದ್ದ ಯೋಜನೆಯನ್ನು ಸರ್ಕಾರವು ದಿನಾಂಕ : 19.4.1995ರಿಂದ ಹಿಂತೆಗೆದುಕೊಂಡಿದೆ.

ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮ.

233 - ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಕೆರೆಗಳಲ್ಲಿ ಹೂಳುತೆಗೆಸುವ ಕಾರ್ಯಕ್ರಮವೇನಾದರು ಸರ್ಕಾರದ ಮುಂದೆ ಇದೆಯೇ,

ಆ) ಕೋಲಾರ ಜಿಲ್ಲೆಯಲ್ಲಿ ಯಾವುದೆ ನದಿ ನಾಲೆಗಳು ಇಲ್ಲದಿರುವ ಕಾರಣ ವ್ಯವಸಾಯಕ್ಕೆ ಕೆರೆಗಳ ಆಸರೆ ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ,